## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಮೂವತ್ತೊಂದನೆಯ ಪದ್ಯ

**ಕರಿಯ ಕಾಯ್ದಾ ಜಲದಿ ಮಕರವ**
**ತರಿದು ಹಿರಣ್ಯಕನನ್ನು ಸೀಳ್ದಾ**
**ತರಳನನ ತಲೆಗಾಯ್ದು ಶಕಟಾಸುರನ ಹತಮಾಡಿ ।**
**ದುರುಳ ಕಂಸನ ಕೊಂದು ಮಗಧನ**
**ಮುರಿದು ವತ್ಸನ ಹಮ್ಮಳಿಸಿ ಖರ-**
**ಹರಣವನು ಹಿಂಗಿಸಿದೆ ರಕ್ಷಿಸು ನಮ್ಮನನವರತ ॥ ೩೧ ॥**

'ಆ ಜಲದಿ' ಆ ತ್ರಿಕೂಟಪರ್ವತದ ಬಳಿಯಿದ್ದ ಸರೋವರದಲ್ಲಿನ ನೀರಿನಲ್ಲಿ ಕದನವಾಡುತ್ತಿದ್ದ 'ಮಕರವ' ಮೊಸಳೆಯನ್ನು 'ತರಿದು' ತನ್ನ ಚಕ್ರದಿಂದ ಕತ್ತರಿಸಿ ಕರಿಯ ಆನೆಯನ್ನು ಕಾಯ್ದು,

'ಆ ಹಿರಣ್ಯಕನನ್ನು' ದೇವ ಮನುಜರಿಗೆಲ್ಲಾ ಕಂಟಕಪ್ರಾಯನಾಗಿ ವೈಷ್ಣವೋತ್ತಮನಾದ ತನ್ನ ಮಗನನ್ನೇ ಕೊಲ್ಲ ಹೊರಟಿದ್ದ ಹಿರಣ್ಯಕಶಿಪುವನ್ನು

'ಸೀಳ್ದ' ಸೀಳಿ 'ತರಳನನ ತಲೆಗಾಯ್ದ'
ಪ್ರಹ್ಲಾದನನ್ನು ಸಾಯದ ಹಾಗೆ ಸಂರಕ್ಷಿಸಿ,

'ಶಕಟಾಸುರನ ಹತಮಾಡಿ' ತನ್ನನ್ನು ಕೊಲ್ಲಲು
ಬಂಡಿಯಲ್ಲಿ ಬಂಡಿಯ ರೂಪದಲ್ಲೇ ಅವಿತು
ಕುಳಿತಿದ್ದ ಶಕಟ ಎಂಬ ಕಂಸನ ಭೃತ್ಯನಾದ
ಅಸುರನನ್ನು ಸಂಹರಿಸಿ,

'ದುರುಳ ಕಂಸನ', ತನ್ನ ತಂದೆ ತಾಯಿಯರಾದ
ವಸುದೇವ ದೇವಕಿಯರನ್ನು ಬಂಧನದಲ್ಲಿಟ್ಟು,
ಯಾದವರೆನ್ನೆಲ್ಲಾ ತನ್ನಾಳುಗಳನ್ನಾಗಿ
ದುಡಿಸಿಕೊಳ್ಳುತ್ತಾ, ಸ್ವಯಂ ತನ್ನ ತಂದೆಯಾದ
ಉಗ್ರಸೇನನನ್ನೇ ಕಾರಾಗೃಹದಲ್ಲಿಟ್ಟಿದ್ದ ದುರುಳ
ಕಂಸನನ್ನು 'ಕೊಂದು' ಕಾಲಿನಿಂದ ಒದ್ದು ಒದ್ದು
ಸಂಹಾರಮಾಡಿ,

'ಮಗಧನ ಮುರಿದು' ದುಷ್ಟಾಗ್ರಣಿಯಾದ
ಮಗಧಾಧಿಪತಿ ಜರಾಸಂಧನನ್ನು ಭಕ್ತೋತ್ತಮನಾದ
ಭೀಮಸೇನದಿಂದ ಕೊಲ್ಲಿಸಲು ಅವನ
ರಾಜಧಾನಿಗೇ ಕರೆದುಕೊಂಡು ಹೋಗಿ ಜರೆ ಎಂಬ
ಅಸುರೆಯಿಂದ ಸೇರಿಸಲ್ಪಟ್ಟಿದ್ದ ಅವನ ದೇಹದ

ಎರಡು ಭಾಗಗಳನ್ನು ಮುರಿದು ಆ ಜರಾಸಂಧನನ್ನು ಕೊಲ್ಲಿಸಿದ,

'ವತ್ಸನ ಹಮ್ಮಳಿಸಿ'  ನೀನು ಆರುವರ್ಷದವನಾಗಿದ್ದಾಗ ತಂದೆಯ ನಿಯುಕ್ತನಾಗಿ ಕರುಗಳನ್ನು ಕಾಯುತ್ತಿದ್ದಾಗ, ಕಂಸ ಕಳಿಸಿದ ವತ್ಸ ಎನ್ನುವ ದೈತ್ಯನೊಬ್ಬ ಕರುವಿನ ರೂಪದಲ್ಲಿ ಬಂದು ಉಳಿದ ಕರುಗಳನ್ನು ಮತ್ತು ನಿನ್ನನ್ನು ಕೊಲ್ಲಲು ಪ್ರಯತ್ನಿಸಿದಾಗ ಅದರ ಹಿಂದಿನ ಕಾಲ್ಗಳು ಮತ್ತು ಬಾಲ ಎರಡನ್ನೂ ಹಿಡಿದುಕೊಂಡು ಎತ್ತಿ ಗರಗರನೇ ತಿರುಗಿಸಿ ಬೇಲದ ಮರಕ್ಕೆ ಬೀಸಿ ಹೊಡೆದು ಅವನ ಪರಾಕ್ರಮದ ಹಮ್ಮನ್ನು ಅಹಂಕಾರವನ್ನು ಅಳಿಸಿ ನಾಶಮಾಡಿ ಅರ್ಥಾತ್ ಅವನನ್ನು ಸಂಹಾರ ಮಾಡಿ,

'ಖರಹರಣವನು ಹಿಂಗಿಸಿದೆ' ಖರ ಎಂದರೆ ಕತ್ತೆ, ಕತ್ತೆಗಳ ರೂಪವನ್ನು ಹೊತ್ತಿದ್ದ ಅಸುರರ ಹರಣವನು ಪ್ರಾಣವನು ಹಿಂಗಿಸಿದೆ ಕರಗಿಸಿದೆ ಅರ್ಥಾತ್ ಕೊಂದೆ, ಬಲರಾಮ ಧೇನುಕಾಸುರನನ್ನು ಕೊಂದ ಬಳಿಕ ಅವನ ಅನುಚರರಾದ ಕತ್ತೆಯ ರೂಪದಲ್ಲಿದ್ದ ಗಣಪತಿಯ

ವರದಿಂದ ಅವಧ್ಯರಾದ ರಾಕ್ಷಸರು, ಗೋಪವೃಂದದ ಮೇಲೆರಗಿ ಬರುತ್ತಾರೆ ಆಗ ಓ ಶ್ರೀಕೃಷ್ಣ ! ನೀನು ಅವರೆಲ್ಲರನ್ನು ಕೊಂದು ತಾಲವನದಲ್ಲಿ ವಿಹರಿಸಿ ಗೋಪಾಲಕರಿಗೆ ತಾಳೆಯ ಹಣ್ಣುಗಳನ್ನು ನೀಡಿ ರಕ್ಷಿಸಿದೆ.

ಪ್ರತೀನಿತ್ಯವೂ ನೂರಾರು ಆಂತರಿಕ ಅಸುರರ ಬಾಧೆಗೆ ಒಳಗಾಗುವ ನಮ್ಮನ್ನು ಅನವರತವೂ ಪ್ರತೀ ಬಾರಿ ನಾವು ಅಸುರರ ಪೀಡೆಗೊಳಗಾದಾಗ ರಕ್ಷಿಸು ॥ ೩೧ ॥